# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 1216/2015

ಸಾಕ್ಷಿಯ ಹೆಸರು : ದೇವರಾಜ ಸಿ.ಡಬ್ಲ್ಯೂ : **9**
ತಂದೆ ಹೆಸರು : ಸ್ವಾಮೀಗೌಡ ಪಿ.ಡಬ್ಲ್ಯೂ : **6**
ವಯಸ್ಸು : **60** ವರ್ಷ ಪ್ರಮಾಣೀಕರಿಸಿದ ದಿಃ **10/01/2023**
ವೃತ್ತಿ : ವ್ಯವಸಾಯ
ವಾಸ : ಬಿ.ಸಮುದ್ರವಳ್ಳಿ

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ. ಆರೋಪಿಗಳು ನನಗೆ ಗೊತ್ತಿಲ್ಲ. ಈ ಪ್ರಕರಣದ ಗಲಾಟೆ ಬಗ್ಗೆ ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಅಮಾನತು ಮಹಜರು ಕ್ರಮ ನಡೆಸಿಲ್ಲ. ಪೋಲೀಸರ ಕೋರಿಕೆ ಮೆರೇಗೆ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿ ಮಹಜರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಮಹಜರನ್ನು ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕಃ 17.02.2015 ರಂದು ಹೊಳೆನರಸೀಪುರ ಗ್ರಾಮಾಂತರ ಠಾಣಾ ಮುಂದೆ ತನಿಖಾಧಿಕಾರಿಗಳು ನನ್ನನ್ನು ಪಂಚರಾಗಿ ಬರಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ತನಿಖಾಧಿಕಾರಿಗಳಾದ ಚಾಸಾ-18 ರವರು ನಮಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿಸುತ್ತಾ ದಿನಾಂಕಃ 15.11.2014 ರಂದು ಮಧ್ಯರಾತ್ರಿ ಸುಮಾರು 02.30 ಸಮಯದಲ್ಲಿ ಹಾಸನ-ಮೈಸೂರು ರಸ್ತೆಯಲ್ಲಿ ಇರುವ ಎಂ.ಎಸ್.ಐ.ಎಲ್. ಮಧ್ಯ ಮಾರಾಟದ ಮಳಿಗೆಯ ಹಿಂಭಾಗದ ಗೋಡೆಯನ್ನು ಆರೋಪಿಗಳು ಕಬ್ಬಿಣದ ತುಂಡು ಹಾಗೂ ಹಾರೆಯಿಂದ ಕೊರೆದು ಅಲ್ಲಿದ ವಸ್ತುಗಳನ್ನು ಟಾಟಾ ಎಸ್ ವಾಹನದ ಮೂಲಕ ಕಳವು ಮಾಡಿರುವ ಬಗ್ಗೆ ನಮಗೆ ತಿಳಿಸಿದರು ಎಂದರೆ ಗೊತ್ತಿಲ್ಲ. ಆರೋಪಿಗಳುನ್ನು ಮತುತ ಟಾಟಾ ಎಸ್ ವಾಹನವನ್ನು ತೋರಿಸಿದರು ಎಂದರೆ ಸರಿಯಲ್ಲ. ನಮ್ಮಗಳ ಮುಂದೆ ಕೆಎ-13-5470 ನಂಬರಿನ ಟಾಟಾ ಎಸ್ ವಾಹನವನ್ನು ಎವರಿಡೇ ಕಂಪನಿಯ ಒಂದು ಕೆಂಪು ಟಾರ್ಚ್ ಅನ್ನು ನೋಕಿಯಾ ಕಂಪನಿಯ ಒಂದು ಮೊಬೈಲ್ ಫೋನು ಅನ್ನು 750 ಎಂ.ಎಲ್. ಅನ್ನು 5 ರಾಯಲ್ ಚಾಲೆಂಚ್ ಬಾಟೆಲ್ ಗಳನ್ನು, 375 ಎಂ.ಎಲ್. ಅನ್ನು ಮಾಕ್ಯಡೋಲ್ ಕಂಪನಿಯ 9 ಮಧ್ಯ ತುಂಬಿದ 375 ಬಾಟೆಲ್ ಗಳನ್ನು

ಮತ್ತು 180 ಎಂ.ಎಲ್.ನ ಮಾಕ್ಯ ಡೋಲ್ ಕಂಪನಿಯ 11 ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳನ್ನು ಹಾಗೂ ಒಂದು ಬಿಳಿ ಪ್ಲಾಸ್ಟಿಕ್ ಚೀಲವನ್ನು ನಮ್ಮಗಳ ಸಮಕ್ಷಮ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಮಹಜರನ್ನು ಬೆಳಿಗ್ಗೆ 11.30 ರಿಂದ 12.30 ರವರಗೆ ನನ್ನ ಹಾಗೂ ಚಾಸಾ-10, 14, 15 ರವರ ಸಮಕ್ಷಮ ಜರುಗಿಸಿ ತನಿಖಾಧಿಕಾರಿಗಳು ವಶಕ್ಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ತನಿಖಾಧಿಕಾರಿಗಳು ತಿಳಿಸಿ ಮೇಲ್ಕಂಡ ವಸ್ತುಗಳನ್ನು ನಮ್ಮ ಸಮಕ್ಷಮ ವಶಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ.

ಪ್ರಕರಣದ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಮತ್ತು ಪಂಚರಾಗಿ ಹಾಜರಾಗಿ ಸಹಿ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃಆರೋಪಿ ಪರ ವಕೀಲರಾದ ಶ್ರೀ ಬಿ.ಹೆಚ್.ವಿ., ಹೆಚ್.ಟಿ.ಆರ್. ಆರ್.ಪಿ., ಬಿ.ಎನ್ ಆರ್ ವಕೀಲರಿಂದ ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ